/668823/2024

ಕರ್ನಾಟಕ ಸರ್ಕಾರ
**ತಾಂತ್ರಿಕ ಶಿಕ್ಷಣ ಇಲಾಖೆ**

TE-ADMI0EST(10)/41/2024-JD-DEPT TECH /871

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 19.08.2024

# ಹಿಂಬರಹ

ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ 7 ನೇ ವೇತನ ಶ್ರೇಣಿ ರೂ.57700-182400/- ಲೆವಲ್-10 ರಿಂದ ರೂ.68900-205500/- ಲೆವಲ್-11ಕ್ಕೆ ಪದೋನ್ನತಿ ನೀಡಿರುವ ಸರ್ಕಾರದ ಆದೇಶ ಸಂ: ಇಡಿ 108 ಡಿಟಿಇ 2024, ದಿ: 13.08.2024 ನ್ನು ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರ ಮುಖಾಂತರ ಸಹಾಯಕ ಪ್ರಾಧ್ಯಾಪಕರುಗಳಿಗೆ ಮಾಹಿತಿಗಾಗಿ ಹಾಗೂ ಪ್ರಾಂಶುಪಾಲರಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, ಎ&ಇ, ಬೆಂಗಳೂರು. ಇಇ-II
2. ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ - ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರುಗಳಿಗೆ (ಪ್ರಾಂಶುಪಾಲರ ಮುಖಾಂತರ).
4. ನೋಡಲ್ ಅಧಿಕಾರಿ, ಇ-ಆಡಳಿತ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಅಳವಡಿಸಲು)

ಪ್ರತಿ:-

1. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ), ಬಹುಮಹಡಿ ಕಟ್ಟಡ, ಬೆಂಗಳೂರು.
2. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಆಪ್ತ ಶಾಖೆ, ಜಂಟಿ ನಿರ್ದೇಶಕರು(ಆಡಳಿತ) ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಹೆಚ್ಚುವರಿ ಪ್ರತಿ ಕಡತಕ್ಕೆ

Scanned with OKEN Scanner

ಸಂಖ್ಯೆ 498
ದಿನಾಂಕ 14 AUG 2024

# ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:** ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ, ಸಹಾಯಕ ಪ್ರಾಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನಶ್ರೇಣಿ ರೂ. 57700-182400 ಲೆವೆಲ್-10 ರಿಂದ ರೂ. 68900-205500, ಲೆವೆಲ್-11ಕ್ಕೆ ಪದೋನ್ನತಿ ನೀಡುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ:ಇಡಿ 12 ಡಿಟಿಇ 2019, ದಿನಾಂಕ: 24.03.2020.
2. ಸರ್ಕಾರದ ಪತ್ರ ಸಂಖ್ಯೆ:ಇಡಿ/86/ಡಿಟಿಇ/2023, ದಿನಾಂಕ: 07.10.2023.
3. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರ ಏಕ ಕಡತ ಸಂಖ್ಯೆ: DTE-ADMI0EST(10)/41/2024 (1453548)

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಸರ್ಕಾರದ ಆದೇಶ ಸಂಖ್ಯೆ: ಇಡಿ 12 ಡಿಟಿಇ 2019, ದಿ: 24.03.2020ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನವನ್ನು ದಿನಾಂಕ: 01.01.2016ರಿಂದ ಅನ್ವಯಿಸುವಂತೆ ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರದ ಪತ್ರದಲ್ಲಿ ಎಐಸಿಟಿಇ ಅಧಿಸೂಚನೆ ಸಂ: F.No. 61-1/RIFD/7thCPC/2016-17, ದಿನಾಂಕ:01.03.2019 ರಲ್ಲಿ ನೇಮಕಾತಿ ಮುಂಬಡ್ತಿಗೆ ನಿಗದಿಪಡಿಸಲಾಗಿರುವ ಎಲ್ಲಾ ನಿಯಮಾವಳಿಗಳನ್ನು ಅಳವಡಿಸಿಕೊಂಡು ಹಾಗೂ ಎಐಸಿಟಿಇ ಮತ್ತು ಯುಜಿಸಿ 2010 ಮತ್ತು 2018ರ ಆದೇಶ ಸಂ:-F.1-2/2017(EC/PS) ದಿನಾಂಕ18.07.2018 UGC REGULATIONS ಮುಂಬಡ್ತಿಗೆ ನಿಗಧಿಪಡಿಸಲಾಗಿರುವ ಎಲ್ಲಾ ಮಾನದಂಡಗಳನ್ನು ಅಳವಡಿಸಿಕೊಂಡು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡುವ ಪ್ರಸ್ತಾವನೆಗಳನ್ನು ಪರಿಶೀಲಿಸಲು ಪ್ರತ್ಯೇಕ ಸ್ಕ್ರೀನಿಂಗ್ ಸಮಿತಿಯನ್ನು ರಚಿಸುವ ಅಧಿಕಾರವನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ಪ್ರತ್ಯಾಯೋಜಿಸಲಾಗಿದೆ.

ಮುಂದುವರೆದು, ಎಐಸಿಟಿಇ ಪತ್ರ ಸಂ: F.No. 27/AICTE RIFD/PAYSCALE/2018-19, ದಿನಾಂಕ: 20.05.2020 ರಲ್ಲಿ ಮೇಲೆ ತಿಳಿಸಲಾದ 7ನೇ ಎಐಸಿಟಿಇ ವೇತನದಲ್ಲಿ ನಿಗದಿಪಡಿಸಲಾಗಿರುವ ವಿದ್ಯಾರ್ಹತೆ ಮತ್ತು ಇತರೆ ಮಾನದಂಡಗಳು, ಪದೋನ್ನತಿಗೆ ಕಾಲಾವಕಾಶ, ಅಲ್ಪಾವಧಿ ತರಬೇತಿ, ಇತರೆ ವಿಷಯಗಳಿಗೆ ಸ್ಪಷ್ಟೀಕರಣವನ್ನು ನೀಡಲಾಗಿದೆ.

...2

Scanned with OKEN Scanner

ಮೇಲೆ ಓದಲಾದ (3)ರ ಆಯುಕ್ತರ ಏಕಕಡತದಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ವಿಷಯ ತಜ್ಞರುಗಳನ್ನೊಳಗೊಂಡ ಸ್ಥಾನೀಕರಣ ಸಮಿತಿಯು ದಿನಾಂಕ:01.07.2024 ರಿಂದ 04.07.2024ರವರೆಗೆ ಸಭೆ ಸೇರಿ ಸರ್ಕಾರಿ ಇಂಜಿನಿಯರಿಂಗ್ 1) ರಸಾಯನಶಾಸ್ತ್ರ ವಿಭಾಗದ 01 ಸಹಾಯಕ ಪ್ರಾಧ್ಯಾಪಕರು, 2) ಭೂವಿಜ್ಞಾನ ವಿಭಾಗದ 01 ಸಹಾಯಕ ಪ್ರಾಧ್ಯಾಪಕರು 3) ಆಂಗ್ಲಭಾಷೆ ವಿಭಾಗದ 01 ಸಹಾಯಕ ಪ್ರಾಧ್ಯಾಪಕರು, 4) ಗ್ರಂಥಾಲಯ ವಿಭಾಗದ 01 ಸಹಾಯಕ ಪ್ರಾಧ್ಯಾಪಕರು ಹಾಗೂ 5) ಗಣಿತ ವಿಭಾಗದ 01 ಸಹಾಯಕ ಪ್ರಾಧ್ಯಾಪಕರುಗಳನ್ನೊಳಗೊಂಡಂತೆ ಒಟ್ಟು 05 ಸಹಾಯಕ ಪ್ರಾಧ್ಯಾಪಕರುಗಳು 7ನೇ ಎಐಸಿಟಿಇ ವೇತನಶ್ರೇಣಿಯಡಿ ರೂ. 57700-182400 ಲೆವೆಲ್-10 ರಿಂದ ರೂ. 68900-205500, ಲೆವೆಲ್-11 ಗಳಿಗೆ ಪದೋನ್ನತಿ ಹೊಂದಲು ನಿಯಮಾನುಸಾರ ಅರ್ಹತೆ ಹೊಂದಿರುವ ಬಗ್ಗೆ, ಪರಿಶೀಲಿಸಿ, ಸದರಿಯವರಿಗೆ ಪದೋನ್ನತಿಯನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುವುದಾಗಿ ತಿಳಿಸಲಾಗಿದೆ.

ಅದರಂತೆ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 05 ಸಹಾಯಕ ಪ್ರಾಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿ ರೂ.57700-182400 ಲೆವೆಲ್-10 ರಿಂದ ರೂ. 68900-205500, ಲೆವೆಲ್-11ಕ್ಕೆ ಸದರಿಯವರುಗಳು ಮುಂಬಡ್ತಿಗೆ ಅರ್ಹತೆ ಪಡೆದ ದಿನಾಂಕದಿಂದ ಪದೋನ್ನತಿ ನೀಡುವಂತೆ ಕೋರಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 108 ಡಿಟಿಇ 2024**

**ಬೆಂಗಳೂರು, ದಿನಾಂಕ:13ನೇ ಆಗಸ್ಟ್ 2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಳಕಂಡ ಸಹಾಯಕ ಪ್ರಾಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನಶ್ರೇಣಿ ರೂ.57700-182400 ಲೆವೆಲ್-10 ರಿಂದ ವೇತನ ಶ್ರೇಣಿ ರೂ.68900-205500, ಲೆವೆಲ್-11ಕ್ಕೆ ಪದೋನ್ನತಿಯನ್ನು ಅರ್ಹತಾ ದಿನಾಂಕದಿಂದ ಹಾಗೂ ಆರ್ಥಿಕ ಸೌಲಭ್ಯವನ್ನು ಭವಿಷ್ಯವರ್ತಿಯಾಗಿ ಅಂದರೆ, ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಮಂಜೂರು ಮಾಡಿ ಆದೇಶಿಸಿದೆ.

| ಕ್ರ. ಸಂ | ಹೆಸರು, ಪದನಾಮ ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ | ಸೇವೆಗೆ ಸೇರಿದ ದಿನಾಂಕ | ಎಐಸಿಟಿಇ ಮಾನದಂಡಗಳನ್ನು ಪೂರೈಸಿರುವ ದಿನಾಂಕ | ಮುಂಬಡ್ತಿಗೆ ಅರ್ಹತೆ ಪಡೆದ ದಿನಾಂಕ |
|---|---|---|---|---|
| **ರಸಾಯನಶಾಸ್ತ್ರ ವಿಭಾಗ** | | | | |
| 1. | ಶ್ರೀ ನಾಗಭೂಷಣ ಎಂ.ಎಂ<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಯಚೂರು | 04.09.2013 | 01.03.2019 | 01.03.2019 |

...3

Scanned with OKEN Scanner

| | | | | |
|---|---|---|---|---|
| **ಭೂ ವಿಜ್ಞಾನ ವಿಭಾಗ** | | | | |
| 2. | ಡಾ ಸ್ವಾಮಿ ಆರ್.ಟಿ<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು,<br>ಹೂವಿನಹಡಗಲಿ | 22.10.2012 | 14.03.2022 | 01.03.2019 |
| **ಆಂಗ್ಲಭಾಷೆ ವಿಭಾಗ** | | | | |
| 3. | ಸಂಜೀವ ಪಿ<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು,<br>ಕುಶಾಲನಗರ | 07.03.2011 | 16.10.2020 | 01.03.2019 |
| **ಗ್ರಂಥಾಲಯ ವಿಭಾಗ** | | | | |
| 4 | ಡಾ ಸತ್ಯಶ್ರೀ ಕೆ.ಎಸ್<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು,<br>ಕುಶಾಲನಗರ | 08.10.2010 | 08.10.2016 | 08.10.2016 |
| **ಗಣಿತ ವಿಭಾಗ** | | | | |
| 5 | ಡಾ ಸುಜಾತಾ ತಿಮ್ಮನಾಯ್ಕರ,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು,<br>ಹಾವೇರಿ | 31.10.2014 | 01.03.2019 | 01.03.2019 |

**ಷರತ್ತುಗಳು:**

i. 2019 ಮತ್ತು 2020ರ 7ನೇ ಎಐಸಿಟಿಇ ವೇತನ ಶ್ರೇಣಿಗಳಲ್ಲಿನ ಮಂಜೂರಾತಿಯು ಸರ್ಕಾರದ ಮಾರ್ಗಸೂಚಿ/ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ.

ii. ಎಐಸಿಟಿಇ/ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ ಸುತ್ತೋಲೆ/ ಪತ್ರಗಳಲ್ಲಿ ನಿಗದಿಪಡಿಸುವ ಷರತ್ತು/ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

iii. ಅರ್ಹ ಸಹಾಯಕ ಪ್ರಾಧ್ಯಾಪಕರುಗಳು ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಯಾವುದೇ ತಪ್ಪು ಮಾಹಿತಿಗಳನ್ನು ಒದಗಿಸಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರುಗಳ ಪದೋನ್ನತಿ ಸೌಲಭ್ಯವನ್ನು ಯಾವುದೇ ಮುನ್ಸೂಚನೆ ನೀಡದೇ ಹಿಂಪಡೆಯಲಾಗುವುದು ಹಾಗೂ ತಪ್ಪು ಮಾಹಿತಿ ಒದಗಿಸಿದ ಸಹಾಯಕ ಪ್ರಾಧ್ಯಾಪಕರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು.

iv. ಸಹಾಯಕ ಪ್ರಾಧ್ಯಾಪಕರುಗಳು ಸಲ್ಲಿಸಿರುವ ದಾಖಲೆಗಳಲ್ಲಿ ವ್ಯತ್ಯಾಸಗಳು, ಅಸಂಗತತಗಳು, ಕಂಡುಬಂದಲ್ಲಿ ಮುಂದಿನ ದಿನಗಳಲ್ಲಿ ಅದರ ಸಾಧಕ-ಬಾಧಕಗಳಿಗೆ ಸಂಪೂರ್ಣವಾಗಿ ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರುಗಳೇ ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತಾರೆ.

...4

Scanned with OKEN Scanner

v. ಸರ್ಕಾರವು ಹೊರಡಿಸುವ ಮುಂಬಡ್ತಿಯ ಆದೇಶದ ಮೇರೆಗೆ ಸಂಬಂಧಪಟ್ಟ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳು ಎಲ್ಲಾ ದಾಖಲಾತಿಗಳನ್ನು ಮತ್ತೊಮ್ಮೆ ಪರಿಶೀಲಿಸಿದ ನಂತರ ಸಹಾಯಕ ಪ್ರಾಧ್ಯಾಪಕರ ವೇತನ ನಿಗದಿಗೊಳಿಸಲು ಅಗತ್ಯ ಪ್ರಸ್ತಾವನೆಯನ್ನು ಮಹಾಲೇಖಪಾಲರ ಕಛೇರಿಗೆ ಕಳುಹಿಸುವ ಬಗ್ಗೆ ಕ್ರಮಕೈಗೊಳ್ಳತಕ್ಕದ್ದು.

vi. ಸ್ಥಳೀಯ/ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಡಿಸಿದಾಗ, ಯಾವುದೇ ಅಸಂಗತಗಳು ಕಂಡು ಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ

vii. ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಪದೋನ್ನತಿ ವೇತನ ನಿಗದಿಯಲ್ಲಿ ಸರ್ಕಾರ/ಎಐಸಿಟಿಇ ನಿಯಮಗಳನ್ವಯ ಯಾವುದಾದರೂ ಲೋಪದೋಷಗಳು ಕಂಡುಬಂದಲ್ಲಿ ಅಂತಹ ಮುಂಬಡ್ತಿ ಆದೇಶವನ್ನು ರದ್ದುಪಡಿಸಿ ವೇತನ ವ್ಯತ್ಯಾಸದ ಮೊತ್ತವನ್ನು ವಸೂಲು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

viii. ಈ ಆದೇಶದಂತೆ ನೀಡಲಾದ ಪದೋನ್ನತಿಯನ್ನು ಸೇವಾ ಜೇಷ್ಠತೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

ix. ಸಹಾಯಕ ಪ್ರಾಧ್ಯಾಪಕರುಗಳ ಪದೋನ್ನತಿಯ ಮಂಜೂರಾತಿಯ ವಿವರಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಸೇವಾ ಪುಸ್ತಕದಲ್ಲಿ ನಮೂದಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

13/8/2024

**(ಮಹಾಂತೆಪ್ಪ ಎಸ್.ತುರಕನೂರ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಎ&ಇ), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರುಗಳಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರ ಕಛೇರಿಯ ಮೂಲಕ)

**ಪ್ರತಿ:**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

Scanned with OKEN Scanner